27	ಬೀದರ್	ಮೆ. ಲಕ್ಕಿ ಬುಲ್ಲಕ್ ಕಾರ್ಟ್ ಅಂಡ್ ಅಗ್ರಿಕಲ್ಚರ್ ಇಕ್ವಿಪ್ ಮೆಂಟ್ ಇಂಡಸ್ಟ್ರೀ, ಬೀದರ್	17000	272
		ಮೆ. ಸಭಾ ಟ್ರೇಡಿಂಗ್ ಕಂಪನಿ, ಬೀದರ್	17000	145
	ಒಟ್ಟು			**8589**

1173 (1563) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಯಾವುವು? (ವಿವರ ನೀಡುವುದು)

ಆ) ಈ ಪೈಕಿ ಹಣ ದುರುಪಯೋಗ ಮಾಡಿರುವ ಸಹಕಾರ ಸಂಘಗಳೆಷ್ಟು? ಇವುಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು? (ವಿವರಗಳನ್ನು ಒದಗಿಸುವುದು)

ಇ) ಬೆಂಗಳೂರು ನಗರದಲ್ಲಿರುವ ಅಮರಜ್ಯೋತಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಇರುವ ಸದಸ್ಯರ ಸಂಖ್ಯೆ ಎಷ್ಟು?

ಈ) ಈ ಪೈಕಿ ಎಷ್ಟು ಜನರಿಗೆ ಕಳೆದ 3 ವರ್ಷಗಳಿಂದ ನಿವೇಶನಗಳನ್ನು ವಿತರಣೆ ಮಾಡಲಾಗಿದೆ? ಉಳಿದಿರುವ ಸದಸ್ಯರುಗಳ ಸಂಖ್ಯೆ ಎಷ್ಟು?

ಉ) ಅಮರಜ್ಯೋತಿ ಗೃಹ ನಿರ್ಮಾಣ ಸಹಕಾರ ಸಂಘವು ನಿವೇಶನವನ್ನು ನೀಡಲಾಗುವ ಸಾವಿರಾರು ಜನರಿಗೆ ಲಕ್ಷಾಂತರ ರೂಪಾಯಿಗಳ ಶುಲ್ಕವನ್ನು ವಸೂಲು ಮಾಡಿ ಸುಮಾರು 10 ವರ್ಷಗಳು ಕಳೆದಿದ್ದರೂ ಯಾವುದೇ ನಿವೇಶನಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ನಿವೇಶನ ರಹಿತರಿಗೆ ಹಣ ಹಿಂದಿರುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಋ) ಅಮರಜ್ಯೋತಿ ಗೃಹ ನಿರ್ಮಾಣ ಸಹಕಾರ ಸಂಘದಿಂದ ಹಲವಾರು ಅಕ್ರಮ, ಅವ್ಯವಹಾರ ಮತ್ತು ನಿವೇಶನ ನೀಡದೆ ಸಾರ್ವಜನಿಕರನ್ನು ವಂಚಿಸಿರುವ ದೂರುಗಳಿದ್ದು, ಇದರ ಮೇಲೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಜಿ.ಟಿ.ದೇವೇಗೌಡ (ಸಹಕಾರಿ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 311 ಗೃಹ ನಿರ್ಮಾಣ ಸಹಕಾರ ಸಂಘಗಳು ಇರುತ್ತವೆ. ಈ ಪೈಕಿ 195 ಸಹಕಾರ ಸಂಘಗಳು ಕಾರ್ಯನಿರತವಾಗಿರುತ್ತವೆ, 80 ಸಹಕಾರ ಸಂಘಗಳು ಸ್ಥಗಿತವಾಗಿರುತ್ತವೆ ಹಾಗೂ 36 ಸಹಕಾರ ಸಂಘಗಳು ಸಮಾಪನೆಯಲ್ಲಿರುತ್ತವೆ.

ಆ) ಲಭ್ಯವಿರುವ ಮಾಹಿತಿಯ ಪ್ರಕಾರ ಒಂದು ಗೃಹ ನಿರ್ಮಾಣ ಸಹಕಾರ ಸಂಘ ಅಂದರೆ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರಲ್ಲಿ ಹಣ ದುರುಪಯೋಗವಾಗಿರುತ್ತದೆ. ಈ ಸಂಬಂಧದಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) 2000–2001ನೇ ಸಾಲಿನಲ್ಲಿ ಸಂಘದಲ್ಲಿ ನಡೆದಿದ್ದ ನಿಯಮಬಾಹಿರ ಚಟುವಟಿಕೆಗಳ ಬಗ್ಗೆ ಪ್ರಕರಣ 65 ರಡಿ ಪರಿವೀಕ್ಷಣೆ ನಡೆಸಿ ಪರಿವೀಕ್ಷಣಾ ವರದಿ ಆಧಾರದ ಮೇಲೆ ಸಂಘದ ಮಾಜಿ ಅಧ್ಯಕ್ಷರು, ಮಾಜಿ, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳು ದುರುಪಯೋಗಪಡಿಸಿಕೊಂಡಿದ್ದ ರೂ. 457.69 ಲಕ್ಷ ಮೊಬಲಗಿನ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 69 ರಡಿ ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು–1 ಅದಿಭಾರ ಕ್ರಮ ಕೈಗೊಂಡು ಅವಾರ್ಡ್ ನೀಡಿರುತ್ತಾರೆ. ಈ ಅವಾರ್ಡಿನಲ್ಲಿ ಸಂಘದ ಅಧ್ಯಕ್ಷರಾಗಿದ್ದ ಶ್ರೀ ರಾಜ್‌ಕುಮಾರ್ ಮತ್ತು ಉಪಾಧ್ಯಕ್ಷರಾಗಿದ್ದ ಶ್ರೀ ಎಂ.ವಿ.ರುದ್ರಾಚಾರಿ ಮತ್ತು ಇವರ ಕುಟುಂಬದವರ ಹೆಸರಿನಲ್ಲಿ ಹೊಂದಿರುವ ವಿವಿಧ ಜಮೀನು ಮತ್ತು ಕಟ್ಟಡಗಳನ್ನು ಬಹಿರಂಗ ಹರಾಜು ಮಾಡಿ ಹಣ ವಸೂಲಿ ಮಾಡಲು ಆದೇಶವಾಗಿರುತ್ತದೆ.

ಆ) ಸಂಘದ ಪದಾಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ. ಸಂಘದ ಮಾಜಿ ಅಧ್ಯಕ್ಷರ ವಿರುದ್ಧ ದಾಖಲಾದ ಕ್ರಿಮಿನಲ್ ಮೊಕದ್ದಮೆಯಲ್ಲಿ

ಸದರಿಯವರಿಗೆ ಸೆರೆವಾಸದ ಶಿಕ್ಷೆಯಾಗಿದ್ದು, ನ್ಯಾಯಾಲಯದಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

ಇ) ಸಂಘದಲ್ಲಿ ಹಣ ದುರುಪಯೋಗ ಮಾಡಿದವರ ಆಸ್ತಿಗಳನ್ನು ಜಪ್ತಿ ಮತ್ತು ಮಾರಾಟಕ್ಕೆ ಒಳಪಡಿಸಲಾಗಿರುತ್ತದೆ.

ಈ) 7 ಜನ ಸದಸ್ಯರಲ್ಲದವರಿಗೆ ನಿವೇಶನ ವಿತರಣೆ ಮಾಡಿದ್ದು ಈ ಬಗ್ಗೆ ಸಂಘದ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಉ) ಅನುಮೋದಿತ ನಕ್ಷೆಯ ರೀತ್ಯಾ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ ಜಾಗದಲ್ಲಿ 61 ನಿವೇಶನಗಳನ್ನಾಗಿ ಪರಿವರ್ತಿಸಿ ವಿತರಿಸಿದ್ದಾರೆ. ಈ ಬಗ್ಗೆ ಬಿ.ಡಿ.ಎ. ಕ್ರಮವಿಡಬೇಕಾಗಿರುತ್ತದೆ.

ಊ) ಸಂಘದ ಠೇವಣಿದಾರರ ಜೇಷ್ಠತೆ ಪಟ್ಟಿಯನ್ನು ತಯಾರಿಸಿದ್ದು, ಸದರಿ ಜೇಷ್ಠತಾ ಪಟ್ಟಿಯನ್ವಯ ನಿವೇಶನ ಹಂಚಿಕೆ ಬಗ್ಗೆ ಕ್ರಮ ಕೈಗೊಳ್ಳುವ ಸಂಘಕ್ಕೆ ಸಹಕಾರ ಸಂಘಗಳ ನಿಬಂಧಕರು ನಿರ್ದೇಶನ ನೀಡಿದ್ದು, ಈ ನಿರ್ದೇಶನದನ್ವಯ ಹಾಲಿ ಆಡಳಿತ ಮಂಡಳಿಯು 160ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಹಿಂದಿನ ಆಡಳಿತ ಮಂಡಳಿಯ ನಿವೇಶನ ಹಂಚಿಕೆಯನ್ನು ರದ್ದು ಮಾಡಿರುತ್ತಾರೆ. ಈ ರದ್ದತಿ ಆದೇಶವನ್ನು ಪ್ರಶ್ನಿಸಿ ಒಟ್ಟು 114 ಪ್ರಕರಣಗಳಲ್ಲಿ ಸಂಬಂಧಪಟ್ಟವರು ಸಹಕಾರ ಸಂಘಗಳ ಉಪ ನಿಬಂಧಕರು–2, ಬೆಂಗಳೂರು ನಗರ ಜಿಲ್ಲೆ ಇವರ ನ್ಯಾಯಾಲಯದ ಮುಂದೆ ಪ್ರಕರಣ 70 ರಡಿ ದಾವಾ ದಾಖಲಿಸಿದ್ದು, ಸದರಿ ದಾವಾಗಳನ್ನು ಆದ್ಯತೆ ಮೇರೆಗೆ ಇತ್ಯರ್ಥ ಪಡಿಸಲು ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು–2 ಇವರಿಗೆ ಸೂಚನೆ ನೀಡಲಾಗಿದೆ.

ಋ) ಅಲ್ಲದೆ ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಪ್ರಕರಣ 64 ರ ವಿಚಾರಣೆಗೆ ಆದೇಶಿಸಿದ್ದು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ ಬೆಂಗಳೂರು ಇವರು ವಿಚಾರಣೆ ನಡೆಸುತ್ತಿದ್ದು, ವಿಚಾರಣಾ ವರದಿ ಸಲ್ಲಿಸಲು ಬಾಕಿ ಇರುತ್ತದೆ.

ಇ) ಅಮರಜ್ಯೋತಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ದಿನಾಂಕ: 30–06–2007ಕ್ಕೆ 9109 ಸದಸ್ಯರು ಇರುತ್ತಾರೆ.

ಈ) ಕಳೆದ 03 ವರ್ಷಗಳಿಂದ ವಿತರಿಸಿರುವ ನಿವೇಶನಗಳ ವಿವರ ಕೆಳಕಂಡಂತಿರುತ್ತವೆ.

2004–05	2005–06	2006–07
–	1	4

3500 ಜನ ಸದಸ್ಯರು ನಿವೇಶನ ಠೇವಣಿ ಪಾವತಿಸಿದ್ದು, ಬಾಕಿ ಉಳಿದಿರುತ್ತಾರೆ.

ಉ) ಹೌದು.

ಊ) ಸಂಘದ ವತಿಯಿಂದ ಕ್ರಮವಿಡಬೇಕಾಗಿದೆ.

ಋ) ಸಂಘದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64 ರನ್ವಯ ವಿಚಾರಣೆ ನಡೆಸಲು ಸಹಕಾರ ಸಂಘಗಳ ಉಪ ನಿಬಂಧಕರು–2, ಬೆಂಗಳೂರು ನಗರ ಜಿಲ್ಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಸದರಿ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಅಲ್ಲದೆ ಈ ಸಂಘದಲ್ಲಿ 2000 ಕೋಟಿ ರೂ.ಗಳಿಂಗಿಂತ ಹೆಚ್ಚಿನ ಮೌಲ್ಯವುಳ್ಳ 900 ಎಕರೆ ಜಮೀನನ್ನು ಮತ್ತು 1100 ಬಿ.ಡಿ.ಎ. ಅನುಮೋದಿತ ನಿವೇಶನಗಳನ್ನು ಅಕ್ರಮವಾಗಿ ಮಾರಾಟ ಮಾಡಿರುವ ಮತ್ತಿತರ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ರಾಜ್ಯ ಸರ್ಕಾರವು ಸಿ.ಬಿ.ಐ.ಗೆ ವಹಿಸಿರುತ್ತದೆ.

1175 (1083) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಕೃಷಿ/ಬೆಳೆ ಸಾಲದ ಪೈಕಿ ರೂ. 25,000/–ದಂತೆ ಮನ್ನಾ ಆದ ಒಟ್ಟು ಮೊಬಲಗೆಷ್ಟು? ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು?

ಆ) ಈ ಪೈಕಿ ಸಂಪೂರ್ಣ ಬಡ್ಡಿ ಮನ್ನಾ ಆದ ಮೊಬಲಗೆಷ್ಟು? ಬಿಡುಗಡೆಯಾದ ಮೊಬಲಗೆಷ್ಟು?

ಇ) ದಿನಾಂಕ: 31–12–2006 ರಿಂದ ಪಡೆದ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನು ದಿನಾಂಕ: 31–05–2007ರೊಳಗೆ ಮರು